ಅಸಲು ದಾವಾ ಸಂಖ್ಯೆ **142-2021** ಪಿ.ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **25.02.2026**

ಮು. ಪಾಟೀ ಸವಾಲು **Sri.PCM** ನ್ಯಾಯಾವಾದಿಗಳಿಂದ

ನಾನು ದಾಖಲೆಗಳಿಗೆ ಪೂರಕವಾಗಿ ದಾವಾ ಸ್ವತ್ತಿಗೆ ಚೆಕ್ಕು ಬಂದಿಯನ್ನು ನೀಡದೇ, ಸುಳ್ಳು ಚೆಕ್ಕು ಬಂದಿಯನ್ನು ನೀಡಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಹನುಮ ಉರುಫ್ ಸಿಳ್ಳಿ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಿದ್ದವರಾಗಿದ್ದಾರೆ. ನಿಪಿ.1 ವಂಶ ವೃಕ್ಷಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಿಪಿ.1 ವಂಶವೃಕ್ಷವು ಸರಿಯಾದ ವಂಶ ವೃಕ್ಷ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಈ ಮೇಲೆ ಹೇಳಿದ ಹನುಮ ಉರುಫ್ ಸಿಳ್ಳಿಯವರ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಾನು ಹಾಜರು ಪಡಿಸಿರುವ ಪಹಣಿ ಪತ್ರಿಕೆಗಳು ಪ್ರತಿವಾದಿಯ ಕುಟುಂಬಕ್ಕೆ ಸೇರಿದ ದಾಖಲೆಗಳು ಆಗಿರುತ್ತವೆ ಎಂದರೆ ಸರಿ.

2. ನಿಪಿ.11 ಮತ್ತು 12 ರ ಕ್ರಯ ಪತ್ರಗಳು ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ.ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಾತನ ಹೆಸರಿಗಾಗಲೀ, ನನ್ನ ತಂದೆಯ ಹೆಸರಿಗಾಗಲೀ ಅಥವಾ ನನ್ನ ಹೆಸರಿಗಾಗಲೀ ಕಂದಾಯ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಆದರೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯ ಪತ್ರಗಳು ಆಗಿರುವುದಾಗಿ ನುಡಿಯುತ್ತಾರೆ.

3. ನನ್ನ ತಾತ ಅಥವಾ ನನ್ನ ತಂದೆ ಕ್ರಯ ಪತ್ರಗಳಂತೆ ಖಾತೆ ಮಾಡಿಸಿಕೊಳ್ಳಲು ಪ್ರಯತ್ನಿಸಿರುತ್ತಾರೋ ಅಥವಾ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ನನ್ನ

ತಾತನಾಗಲೀ ಅಥವಾ ನನ್ನ ತಂದೆಯಾಗಲೀ ಅಥವಾ ಈಗ ನಾನಾಗಲೀ ದಾವಾ ಸ್ವತ್ತಿನಲ್ಲಿ ಯಾವತ್ತು ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಯಾವತ್ತು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲದೆ ಇರುವುದರಿಂದ ಇದುವರೆವಿಗೂ ದಾವಾ ಆಸ್ತಿಯ ಖಾತೆಯನ್ನು ಮಾಡಿಸಿಕೊಂಡಿರುವುದಿಲ್ಲ ಅಲ್ಲದೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವತ್ತು ಕಂದಾಯ ವಗೈರೆಗಳನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4. ಕ್ರಯ ಪತ್ರಗಳಂತೆ ಖಾತೆ ಮಾಡಿಕೊಡಿ ಎಂದು ನಾನು ಸಂಬಂಧಪಟ್ಟ ಕಛೇರಿಗೆ ಅರ್ಜಿ ಸಲ್ಲಿಸಿರುತ್ತೇನೆ. ಈ ದಾವೆಯನ್ನು ಸಲ್ಲಿಸುವ ಮುಂಚೆ ಅರ್ಜಿಯನ್ನು ಸಲ್ಲಿಸಿದ್ದೆ. ಸುಮಾರು ದಿನಗಳು ಆಗಿರುವುದರಿಂದ ಅರ್ಜಿಯನ್ನು ಸಲ್ಲಿಸಿರುವ ಸಂಬಂಧ ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನಾನು ಖಾತೆಯನ್ನು ಮಾಡಿಕೊಡಿ ಎಂದು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಗಳನ್ನು ಮತ್ತು ನಿಪಿ.17 ದಾಖಲೆಯನ್ನು ಹೊರತು ಪಡಿಸಿ ಉಳಿದ ದಾಖಲೆಗಳನ್ನು ನಾನು ಸೃಷ್ಟಿಸಿಕೊಂಡು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ಅಸಲು ದಾವಾ ಸಂಖ್ಯೆ 221/2012 ರ ದಾವೆಯ ಸ್ವತ್ತು ನಮ್ಮ ಸ್ವತ್ತಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಆದರೆ ಸದರಿ ಆಸ್ತಿಯು ನಮ್ಮ ಸ್ವತ್ತಿನ ಅಕ್ಕಪಕ್ಕದ ಸ್ವತ್ತಾಗಿರುವುದಾಗಿ ನುಡಿಯುತ್ತಾರೆ.ಅಸಲು ದಾವಾ ಸಂಖ್ಯೆ 221/2012 ರ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮಾನ್ಯ ಹಿರಿಯ

ಸಿವಿಲ್ ನ್ಯಾಯಾಲಯ ನಾಗಮಂಗಲದಲ್ಲಿ ಮೇಲ್ಮನವಿಯು ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ. ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಈ ಮೊದಲು ಪ್ರತಿವಾದಿಯ ಪೂರ್ವಜ್ಜರು ನಂತರ ಅವರ ಗಂಡ ಅನಂತರ ಈಗ ಪ್ರತಿವಾದಿಯು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

**1** ನೇ ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ